ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದರೆ ಈ ಐದು ಜಿಲ್ಲೆಗಳಲ್ಲಿ ಯಾರೂ 1947ರಿಂದ ಆ ಹುಕುಮನ್ನು ಜಾರಿಗೆ ಕೊಟ್ಟಿಲ್ಲವೆಂದು ಅಭಿಪ್ರಾಯವೇ?

ಶ್ರೀ ಟಿ. ಚನ್ನಯ್ಯ.—ನಾನು ಹೇಳಿದ್ದೇನೆ. ಈ ಐದು ಜಿಲ್ಲೆಗಳೂ 1947 ರಿಂದ ಸರ್ಕಾರಿ ಆಜ್ಞೆಯನ್ನು ಜಾರಿಗೆ ಕೊಟ್ಟಿಲ್ಲ.

ಶ್ರೀ ಯು. ಎಂ. ಮಾದಪ್ಪ.—ತುಮಕೂರು, ಮಂಡ್ಯ ಮೈಸೂರು, ಬೆಂಗಳೂರು, ಹಾಸನ ಈ ಜಿಲ್ಲಾ ಬೋರ್ಡುಗಳು ಸರ್ಕಾರದಿಂದ ಬರಬೇಕಾದ ಕೋಟಾವನ್ನು ತೆಗೆದುಕೊಳ್ಳಲಿಲ್ಲವೆ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಯು. ಎಂ. ಮಾದಪ್ಪ.—ಸರ್ಕಾರದ ಹುಕುಮಿಗೆ ವಿರುದ್ಧವಾಗಿ ಕೆಲವು ಡಿಸ್ಟ್ರಿಕ್ಟ್ ಬೋರ್ಡಿನವರು ಒಂದು ತರಹ ಕೊಟ್ಟು ಇನ್ನು ಕೆಲವು ಡಿಸ್ಟ್ರಿಕ್ಟ್ ಬೋರ್ಡಿನವರು ಸರ್ಕಾರದ ಹುಕುಮನ್ನು ಜಾರಿಗೆ ಕೊಡದೆ ಅದಕ್ಕೆ ವಿರುದ್ಧವಾಗಿ ವರ್ತಿಸುವುದರಿಂದ, ಎಲ್ಲೆಲ್ಲ ಹುಕುಂ ಜಾರಿಗೆ ಬಂದಿಲ್ಲವೋ ಅಲ್ಲಿ ಅನ್ಯಾಯ ಮಾಡಿದಂತಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಅನ್ಯಾಯವಾಗುತ್ತಿದೆ. ಇದನ್ನು Public Service Commission ತಿಳಿಸಿದ್ದಾರೆ. ಯಾವ ಡಿಸ್ಟ್ರಿಕ್ಟ್ ಬೋರ್ಡಿನವರು 1947 ರಿಂದ revised scales of pay ಕೊಟ್ಟಿಲ್ಲವೋ ಅವರು ಆ ತಾರೀಖಿನಿಂದ ಅದನ್ನು ಜಾರಿಗೆ ಕೊಡಿ ಎಂಬುದಾಗಿ L. S. G. Commissioner ರವರಿಗೆ ಬರೆದಿದ್ದಾರೆ. ಈ ರೀತಿ ಮಾಡಬೇಕೆಂದು ಸರ್ಕಾರದ ಉದ್ದೇಶವಿದೆ.

ಶ್ರೀ ಯು. ಎಂ. ಮಾದಪ್ಪ.—ಹಾಗೆಯೇ ಅದನ್ನು ಕಾರ್ಯಗತ ಯಾವಾಗ ಮಾಡುತ್ತೀರಿ? ಕಾರ್ಯಗತ ಮಾಡುತ್ತಿರೋ ಅಥವಾ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರು Statutory Body. ಅವರು ಒಪ್ಪದೇ ಹೋದರೆ ಸರ್ಕಾರ ಏನು ಮಾಡುವುದಕ್ಕೂ ಕಷ್ಟವಾಗುತ್ತದೆ. ಈಗ ಡಿಸ್ಟ್ರಿಕ್ಟ್ ಬೋರ್ಡ್‌ಗಳು ಸರ್ಕಾರದ ಅಧೀನಕ್ಕೆ ಬಂದಿರುವುದರಿಂದ ಈಗ ಅಷ್ಟು ಕಷ್ಟವಾಗಲಾರದು.

ಶ್ರೀ ಯು. ಎಂ. ಮಾದಪ್ಪ.—ಮುಖ್ಯ ಮಂತ್ರಿಗಳು Appropriation Bill ನ ವಿಷಯದಲ್ಲಿ ಉತ್ತರ ಹೇಳುತ್ತಾ 4-5 ದಿವಸಗಳಲ್ಲಿ ಜಾಗ್ರತೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದುದು ತಮ್ಮ ಗಮನಕ್ಕೆ ಬಂದಿದೆಯೇ? ಶ್ರೀಮಾನ್ ಬಿ. ಹುಚ್ಚೇಗೌಡರು ಇದೇ ವಿಷಯವನ್ನು ಎತ್ತಿ ಮಾತನಾಡುವಾಗ ತಾವು ಜಾಗ್ರತೆ ಕಾರ್ಯಗತ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಗೊತ್ತಿದ್ದರೆ ನನ್ನನ್ನು ಏಕೆ ಕೇಳುತ್ತೀರಿ?

Mr. SPEAKER.—That information need not have been brought to his notice.

ಶ್ರೀ ಕೆ. ಲಕ್ಕಪ್ಪ.—ಹಾಸನದ ಜಿಲ್ಲಾ ಬೋರ್ಡಿನವರು ಇದುವರೆಗೆ ಏತಕ್ಕೆ ಜಾರಿಗೆ ಕೊಡಲಿಲ್ಲ?

ಶ್ರೀ ಟಿ. ಚನ್ನಯ್ಯ.—ಬಹುಶಃ ಹಣವಿಲ್ಲ. ಹಣದ ಅಭಾವವಿಂದ ಕೊಟ್ಟಿಲ್ಲವೆಂದು ಕಾಣುತ್ತದೆ. ಯಾವ source ನಿಂದ meet ಮಾಡಬೇಕು ಎಂಬುದನ್ನು ಒಪ್ಪದೇ ಇರುವುದರಿಂದ ತಡವಾಗಿದೆ ಅದುದರಿಂದ ಸರಕಾರದವರು ಈ ವಿಷಯದಲ್ಲಿ ಬರೆದಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ನೀವು Government Order ನ್ನು ಜಾರಿಗೆ ಕೊಡಬೇಕು ಎಂದು ಒತ್ತಾಯ ಮಾಡುವುದಕ್ಕೆ ಅಧಿಕಾರವಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಈಗ ಡಿಸ್ಟ್ರಿಕ್ಟ್ ಬೋರ್ಡ್ ಸ್ಪೆಷರ್ ಆಫೀಸರನ್ನು ನಾವೇ appoint ಮಾಡುವುದರಿಂದ ಸರ್ಕಾರದವರು ಮಾಡಿಕೊಡಬೇಕೆಂದು ಒತ್ತಾಯ ಮಾಡುವುದಕ್ಕೆ ಸಾಧ್ಯವಿದೆ.

Depots for Selling Hand-woven Cloth.

Q.—147. Sri R. MUNISWAMIAH (Bangalore North—Scheduled Caste).—

Will the Government be pleased to state :—

(*a*) the number of Depots opened for selling hand-woven cloth ;

(*b*) the places where they are situated ;

(*c*) the amount the Central Government has placed at the disposal of this Government for this purpose ?

A.—Sri H. SIDDAVEERAPPA (Minister for Home and Industries).—

(*a*) Twenty-seven for cotton fabrics ; none for woollen and silk fabrics.

(*b*) 1 Bangalore—K. R. Market
2 Bangalore—Balepet Circle
3 Kanakapura
4 Channapatna
5 Mandya
6 Mysore
7 Nanjangud
8 Chamarajanagar
9 Hassan
10 Sakleshpur
11 Arasikere
12 Channarayapatna
13 Chikmagalur
14 Shimoga
15 Bhadravati
16 Davangere
17 Hosadurga
18 Chitaldrug
19 Challakere
20 Tiptur
21 Kunigal
22 Tumkur
23 Kolar
24 K. G. F.
25 Chikballapur
26 Chintamani
27 Hospet

(*c*) Rs. 1,20,000 for starting 30 Emporia for cotton fabrics.

Rs. 20,000 for 5 Emporia for woollen fabrics.

(SRI H. SIDDAVEERAPPA.)

Rs. 4,000 for one Emporia for art silk fabrics.

ಶ್ರೀ ಆರ್. ಮುನಿಸ್ವಾಮಯ್ಯ.—ಈ 27 ಸ್ಥಳಗಳಲ್ಲಿರತಕ್ಕಂಥ ಡಿಪೋಗಳಲ್ಲಿ ಲಾಭದಾಯಕವಾಗಿ ಯಾವುದಾದರೂ ನಡೆಯುತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ವ್ಯಾಪಾರವೇನೋ ನಡೆಯುತ್ತಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಲಾಭದಾಯಕವಾಗಿ ನಡೆಯುತ್ತಿದೆಯೇ ಇಲ್ಲವೇ ಎಂಬುದಕ್ಕೆ balance sheet ಪರಿಶೀಲನೆಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಈಗ Production Centresಗಳಲ್ಲಿ ಏನೇನು ಮಾಲು ತಯಾರಾಗುತ್ತದೆಯೋ ಅದರ ಮಟ್ಟಿಗೆ ನಿಗದಿ ಮಾಡಿರುವ ಬೆಲೆಯ ಪ್ರಕಾರ ಮಾರಾಟಮಾಡುತ್ತಿದ್ದೇವೆ. ಇನ್ನೂ ಕೆಲವು ಹೊಸದಾಗಿ ಪ್ರಾರಂಭವಾಗಿವೆ. ಆದುದರಿಂದ ಅವು ಯಾವರೀತಿ ಕೆಲಸಮಾಡುತ್ತಿವೆ ಎನ್ನುವುದನ್ನು ಇನ್ನು ಮೇಲೆ ನೋಡಬೇಕಾಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಇಲ್ಲಿ ಎಲ್ಲ ಸರ್ಕಾರೀ ನೌಕರರುಗಳನ್ನೇ ನೇಮಿಸಿದ್ದಾರೆ ಅಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಆರ್. ಮುನಿಸ್ವಾಮಯ್ಯ.—ಬೆಂಗಳೂರಿನಲ್ಲಿ ಮದ್ರಾಸ್‌ನವರು ಎರಡು ಕಡೆ ಅಂಗಡಿಗಳನ್ನು ಇಟ್ಟಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇಟ್ಟಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಡಿಪೋಗಳಲ್ಲಿ ಬಹಳ ಲಾಭ ಬರುತ್ತಿದೆ ಎನ್ನುವುದು ಗೊತ್ತಿದೆಯೇ?

Sri H. SIDDAVEERAPPA.—I want to clear one point. ಇದರಲ್ಲಿ ಲುಕ್ಸಾನು ಆಗುವುದಕ್ಕೆ ಯಾವ ರೀತಿಯಾದ ಕಾರಣವೂ ಇಲ್ಲ. ನಮ್ಮಲ್ಲಿ ಏನು Production Centresನಲ್ಲಿ ತಯಾರು ಮಾಡುತ್ತಾರೋ ಆ ಮಾಲುಗಳನ್ನಿಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ. The rate also is fixed.

ಶ್ರೀ ಆರ್. ಮುನಿಸ್ವಾಮಯ್ಯ.—ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ ಹಣವನ್ನು ತೆಗೆದುಕೊಂಡು ಎಲ್ಲೆಲ್ಲಿ ಡಿಪೋಗಳನ್ನು open ಮಾಡಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—27 ಕಡೆಗಳಲ್ಲಿ open ಮಾಡಿದೆ ಎಂದು ತಿಳಿಸಿದೆ.

ಶ್ರೀ ವಿ. ಮುನಿಯಪ್ಪ.—ಲುಕ್ಸಾನು ಆಗುವುದಕ್ಕೆ ಅವಕಾಶವಿಲ್ಲವೆಂದು ಅಪ್ಪಣೆ ಕೊಡಿಸಿದಿರಿ. ಮಾಲುಗಳನ್ನು ಅಲ್ಲಲ್ಲಿ Taluk Multi-purpose Co-operative Societyಗಳು consignment basis ಮುಖಾಂತರ ತೆಗೆದುಕೊಂಡು ಮಾರುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಆ ಸ್ಕೀಮ್‌ನಲ್ಲಿ ಇಲ್ಲ. ಯಾವ ಸ್ಕೀಮನ್ನು ಹಾಕಿಕೊಟ್ಟಿದ್ದಾರೋ ಅದರ ಪ್ರಕಾರ ಕೆಲಸ ಮಾಡಬೇಕಾಗಿದೆ. ಅದು Central Government ಕೊಡತಕ್ಕಂಥ ದುಡ್ಡು.

ಶ್ರೀ ಕೆ. ಲಕ್ಕಪ್ಪ.—ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು emporiumಗಳನ್ನು ತೆಗೆಯುವುದಕ್ಕೆ ಕೊಟ್ಟಿದ್ದಾರಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಪ್ರತಿಯೊಂದು Centre ಗೂ establishment charges ಗೋಸ್ಕರ ನಾಲ್ಕು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—Establishment ಗೋಸ್ಕರ ಕೊಟ್ಟಿರುವ 1,20,000 ರೂಪಾಯಿಗಳು grant ರೂಪವಾಗಿ ಕೊಟ್ಟಿರುವುದೇ?

ಶ್ರೀ ಎಚ್. ಸಿದ್ದವೀರಪ್ಪ.—Establishment, rent ಎಲ್ಲಾ ಇದರಲ್ಲಿ ಸೇರಿರುತ್ತದೆ. ಅದೆಲ್ಲ ಖರ್ಚಾಗುವ ಬಾಬತು.

ಶ್ರೀ ಕೆ. ಲಕ್ಕಪ್ಪ.—Emporiumಗೆ capitalನ್ನು ಯಾವರೀತಿ ಒದಗಿಸಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಗೌರ್ನಮೆಂಟ್ Production Centreಗಳಿವೆ. ಆ Production Centres ಗಳಲ್ಲಿ ಏನೇನು ಮಾಲುಗಳು ತಯಾರಾಗುತ್ತವೆಯೋ ಅವನ್ನೆಲ್ಲಾ ಇಲ್ಲಿ ಮಾರುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಇದಕ್ಕೆ audit ಏರ್ಪಾಡು ಮಾಡಿದ್ದೀರಾ?

ಶ್ರೀ ಎಚ್ ಸಿದ್ದವೀರಪ್ಪ.—ಹೌದು. ಅದು ಆ ಸ್ಕೀಮಿನಲ್ಲೇ ಸೇರಿದೆ.

ಶ್ರೀ ಜಿ. ಬಸಪ್ಪ.—Production Centreಗಳಲ್ಲಿ ಸಾಕಾದಷ್ಟು ಮಾಲು ಉತ್ಪತ್ತಿ ಆಗುತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಕಡೆಗಳಲ್ಲಿ ಸಾಕಾದಷ್ಟು ಆಗುತ್ತಿದೆ ಎನ್ನುವ ವರದಿ ಬಂದಿದೆ. ಇನ್ನೂ ಹೆಚ್ಚು ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಜಿ. ಬಸಪ್ಪ.—27 Centres ನಲ್ಲಿ ಡಿಪೋಗಳನ್ನು open ಮಾಡಿದ್ದೀರಿ. ಅಲ್ಲಿ ಸಾಕಾಗುವಷ್ಟು ಮಾಲು ಒದಗಿಸಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ಮಾಲು ನಮ್ಮಲ್ಲಿದೆಯೋ ಅಷ್ಟನ್ನೂ ಕೊಟ್ಟಿದ್ದೇವೆ. Production Centre ಗಳಲ್ಲಿ ಕೆಲಸವನ್ನು ಇನ್ನೂ ತ್ವರಿತವಾಗಿ ಮಾಡಬೇಕಾಗಿದೆ.

ಶ್ರೀ ಜಿ. ಬಸಪ್ಪ.—ಈಗ ಇರುವ ಡಿಪೋಗಳಲ್ಲಿ ಎಷ್ಟು ವ್ಯಾಪಾರವಾಗಿದೆ?

ಶ್ರೀ ಎಚ್. ಸಿದ್ದವೀರಪ್ಪ.—1953 ಜುಲೈನಿಂದ ಡಿಸೆಂಬರ್ 54ರ ವರೆಗೆ 27 centreಗಳಿಂದ 3,60,311-10-11 ರೂಪಾಯಿಗಳ ವ್ಯಾಪಾರವಾಗಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಗಾಯಗಳಿಗೆ ಹಾಕುವ lint ಬಟ್ಟೆ ತಯಾರಾಗುತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಯಾವ centre ಗಳಲ್ಲಿ ತಯಾರಾಗುತ್ತಿದೆ ಎಂಬ ವಿವರವಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇದೇ centreನಲ್ಲಿ ತಯಾರಾಗುತ್ತಿದ್ದರೂ ಆಸ್ಪತ್ರೆಗಳಿಗೆ ಏತಕ್ಕೆ supply ಮಾಡುವುದಕ್ಕೆ ಈಗ ಅವಕಾಶ ಕೊಡಲಲ್ಲ?

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರದಲ್ಲಿ ಸರ್ಕಾರದವರು ಈಗಾಗಲೇ ಹುಕುಂ ಕೊಟ್ಟಿದ್ದಾರೆ. ನಮ್ಮ Production Centresನಲ್ಲಿ ಏನು ಮಾಲು ತಯಾರಾಗುತ್ತಿದೆಯೋ ಅದನ್ನೆಲ್ಲಾ ತೆಗೆದುಕೊಳ್ಳಬೇಕು, ಅವುಗಳಿಗೆ preference ಕೊಡಬೇಕು, rates ಹೊರಗಡೆ ಶೇಕಡ 10 ಅಥವಾ 15ಕ್ಕಿಂತ ಜಾಸ್ತಿ ಇದ್ದರೂ ತೆಗೆದುಕೊಳ್ಳಬೇಕು—ಎಂಬುದಾಗಿ S.P.C. ಯವರೂ ಸಹ order ಮಾಡಿದ್ದಾರೆ. ಅದೇ ರೀತಿ ಅವರು ತೆಗೆದು ಕೊಳ್ಳುತ್ತಾರೆಂದು ವರದಿ ಬಂದಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಕೆಲವು ಸೀರೆಗಳಿಗೆ ಆರ್ಡರ್ ಕೊಟ್ಟಿದ್ದೀರಿ. ಅವನ್ನು ತಯಾರು ಮಾಡಿದ್ದಾರೆ. ಆದರೆ ಅಳತೆಯಲ್ಲಿ ಸ್ವಲ್ಪ ಕಮ್ಮಿಯಾಗಿದೆಯೆಂದು ಒಂದು ಸಣ್ಣ objection ಹಾಕಿ ಅವುಗಳನ್ನು ತೆಗೆದುಕೊಳ್ಳದೆ ಅವು ಹಾಗೆಯೇ ಉಳಿದಿವೆ. ಇದರಿಂದ ಲುಕ್ಸಾನು ಆಗಿದೆಯೆಂಬುದು ಗೊತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಎಲ್ಲ ಹಾಗೆ ಆಗಿದೆಯೆಂಬುದನ್ನು ತಿಳಿಸಿದರೆ ಅವೆಲ್ಲವನ್ನೂ ತೆಗೆದು ಕೊಳ್ಳುತ್ತೇವೆ.

Manganese ore (Disposal through Tender).

Q.—330. Sri R. ANANTARAMAN (Chamarajpet).—

Will the Government be pleased to state :—

(*a*) the number of tons of Manganese ore extracted by the Department of Geology during the last year ;

(*b*) the number of tons of the ore in stock at present ;

(*c*) whether tenders were called for last year to dispose of the stock ;

(*d*) the number of tenders received;

(*e*) the rate per ton quoted by the tenderers ;

(*f*) the names of the persons to whom the ore was disposed of ?

A.—Sri H. SIDDAVEERAPPA (Minister for Home and Industries).—

(*a*) 3,000 tons during the year 1954 (excluding an opening stock of 2,132 tons).

(*b*) 3,000 tons.

(*c*) Yes, in December 1954, for the disposal of 1,000 tons each of 38—40 per cent and 40—42 per cent grades.

(*d*) Seven.

(*e*)—

	38-40 per cent Rs.		*40-42 per cent* Rs.	
(1) Messrs. Best & Co., Ltd., Madras ...	15	per ton F.O.R., Kumsi	20	per ton F.O.R., Kumsi.
(2) Messrs. Nakimpex Traders, Bombay ...	35	do	45	do
(3) Murugappa Agencies, Madras ...		...	30	do
(4) R. B. Seth Shreeram Durgaprasad ...	25	do	35	do
(5) Shanker Minerals, Ltd., Madras ...	31	do	45	per ton ex-pits mouth.
(6) Bhargava Mining Co., Bangalore ...	25	do	31	per ton F.O.R., Kumsi.
(7) The Sterling Combine, Bangalore ...	28½	do	30	do

(*f*) The tenders of Messrs. Nakimpex Traders, Bombay, for 38—40 per cent grade ore and of Messrs. Shanker Minerals, Ltd., Madras, for 40—42 per cent grade ore were accepted as the rates quoted by them were the highest for the respective grades of ores.

ಶ್ರೀ ಆರ್. ಅನಂತರಾಮನ್.—ಹೋದವರ್ಷ ಟೆಂಡರುದಾರರು ಅಲ್ಲದೆ ಇನ್ನು ಯಾರಾದರೂ apply ಮಾಡಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಆರ್. ಅನಂತರಾಮನ್.—ಶ್ರೀ ಎಸ್. ಜಿ. ನಾಯ್ಡುರವರು apply ಮಾಡಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು apply ಮಾಡಿಲ್ಲ. ಪ್ರೈವೇಟ್ ಆಗಿ purchase ಮಾಡಿದರು. Tender system ಸರ್ಕಾರದವರು ಜಾರಿಗೆ ತಂದದ್ದು October 1954ನೇ ಇಸವಿಯಿಂದ.

ಶ್ರೀ ಆರ್. ಅನಂತರಾಮನ್.—ಹಾಗಾದರೆ private ಆಗಿ ಎಷ್ಟು ಜನ applications ಹಾಕಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಮೂರು ಜನರು.

ಶ್ರೀ ಆರ್. ಅನಂತರಾಮನ್.—ಯಾರು ಯಾರು ?

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀ ನಾಯ್ಡು, ಶ್ರೀ ಅವಲರೆಡ್ಡಿ ಮತ್ತು ಶ್ರೀ ಭಾರ್ಗವ ಮೈನಿಂಗ್ ಕಂಪನಿ.

ಶ್ರೀ ಜೆ. ಮಹಮ್ಮದ್ ಇಮಾಂ.—ಯಾವ ನಾಯ್ಡು ?

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀ ಎಸ್. ಜಿ. ಎ. ನಾಯ್ಡು.

ಶ್ರೀ ಜೆ. ಮಹಮ್ಮದ್ ಇಮಾಂ.—ಅವರು ಯಾವ ರೇಟ್‌ನಲ್ಲಿ ತೆಗೆದುಕೊಂಡರು ?

ಶ್ರೀ ಎಚ್. ಸಿದ್ದವೀರಪ್ಪ.—40 ರೂಪಾಯಿ.

ಶ್ರೀ ಜೆ. ಮಹಮದ್ ಇಮಾಂ.—ಇನ್ನೊಬ್ಬರು ಯಾವ ರೇಟ್‌ನಲ್ಲಿ ತೆಗೆದುಕೊಂಡರು ?

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀ ಅವಲರೆಡ್ಡಿಯವರು 38-42 per cent ಗ್ರೇಡನ್ನು ಒಂದು ಟನ್‌ಗೆ 40 ರೂಪಾಯಿಗಳಿಗೂ 42-46 per cent ಗ್ರೇಡನ್ನು ಒಂದು ಟನ್‌ಗೆ 55 ರೂಪಾಯಿಗಳಿಗೂ ತೆಗೆದುಕೊಂಡರು. ಭಾರ್ಗವಾ ಮೈನಿಂಗ್ ಕಂಪನಿಯವರು 38-42 per cent ಗ್ರೇಡನ್ನು ಒಂದು ಟನ್‌ಗೆ 40 ರೂಪಾಯಿಗಳಿಗೂ 42-46 per cent ಗ್ರೇಡನ್ನು ಒಂದು ಟನ್‌ಗೆ 55 ರೂಪಾಯಿಗಳಂತೆಯೂ ತೆಗೆದುಕೊಂಡರು.